ಇಲ್ಲ

ಅನುಕೂಲವಾಗುತ್ತಿದೆ.

ರಾಜ್ಯದ ಉಳಿದ ತಾಲ್ಲೂಕುಗಳಲ್ಲಿ ಸಂಚಾರಿ ತಾಲ್ಲೂಕು ಕಛೇರಿಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ವಿಷಯ : - ಲಾಲ್‌ಬಾಗ್ ಹಾಗೂ ಕಬ್ಬನ್ ಪಾರ್ಕ್‌ಗಳನ್ನು ಅಭಿವೃದ್ಧಿಗೊಳಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 353(228)

ಶ್ರೀ ಆರ್. ದಯಾನಂದ್‌ರಾವ್(ಗಾಂಧಿನಗರ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲಾಲ್‌ಬಾಗ್ ಹಾಗೂ ಕಬ್ಬನ್ ಪಾರ್ಕ್‌ಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಒಂದು ಸಮಗ್ರ ಯೋಜನೆಯನ್ನು ಸರ್ಕಾರವು ತಯಾರಿಸಿರುವುದೇ?

ಆ) ಇಲ್ಲದಿದ್ದಲ್ಲಿ ಈ ಪಾರ್ಕ್‌ಗಳನ್ನು ಅಭಿವೃದ್ಧಿಗೊಳಿಸಲು ಒಂದು ಸಮಗ್ರ ಯೊಜನೆಯನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) 1993-94ನೇ ಸಾಲಿನಲ್ಲಿ ಈ ಪಾರ್ಕ್‌ಗಳ ಅಭಿವೃದ್ಧಿಗಾಗಿ ಗೊತ್ತುಪಡಿಸಿದ ಹಣವೆಷ್ಟು?

ಈ) ಇದರಲ್ಲಿ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು)

ಹೌದು

ಸಮಗ್ರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1993-94ನೇ ಸಾಲಿನಲ್ಲಿ ಈ ಪಾರ್ಕ್‌ಗಳ ಅಭಿವೃದ್ಧಿಗಾಗಿ ಗೊತ್ತುಪಡಿಸಿದ ಹಣ (ಲಕ್ಷರೂ.ಗಳಲ್ಲಿ)

		ಯೋಜನೆ	ಯೋಜನೇತರ	ಒಟ್ಟು
1.	ಲಾಲ್‌ಬಾಗ್ ಸಸ್ಯತೋಟ	25.00	17.66	42.66
2.	ಕಬ್ಬನ್ ಉದ್ಯಾನವನ	10.00	19.95	29.95
	ಒಟ್ಟು	35.00	37.61	72.61

ಈಗಾಗಲೇ ಖರ್ಚಾಗಿರುವ ಹಣ(ಲಕ್ಷ ರೂ.ಗಳಲ್ಲಿ)

		ಯೋಜನೆ	ಯೋಜನೇತರ	ಒಟ್ಟು
1.	ಲಾಲ್‌ಬಾಗ್ ಸಸ್ಯತೋಟ	0.75	8.10	8.85
2.	ಕಬ್ಬನ್ ಉದ್ಯಾನವನ	0.60	10.32	10.92
ಒಟ್ಟು		1.35	18.42	19.77